ಶ್ರೀ ಪಿ. ಪಿ. ಹೆಗಡೆ .—ಕಬ್ಬೂರಿನಲ್ಲಿ ಈಗ ೩-೪ ವರ್ಷಗಳಿಂದಲೂ ಮಳೆಯೇ ಇಲ್ಲ. ಕೆರೆಯಲ್ಲಿ ನೀರೂ ಇಲ್ಲ, ಅಲ್ಲಿ ನೀರೂ ಕೊಟ್ಟೂ ಇಲ್ಲ. ಆದರೆ ಈ ವರ್ಷದಲ್ಲಿ ವಾಟರ್ ರೇಟ್ ಅನ್ನು ವಸೂಲು ಮಾಡುವುದಕ್ಕೆ ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ನಾನು ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇನೆ ಅಲ್ಲಿ ಯಾವ ವರ್ಷ ನೀರು ಬಂದಿದೆ ಎಂಬುದನ್ನು ತಿಳಿಸಬೇಕೆಂದು. ಆದ್ದರಿಂದ ಅಲ್ಲಿ ಯಾವ ವರ್ಷ ನೀರು ಕೊಟ್ಟಿದೆ ಎಂಬುದನ್ನು ತಿಳಿದುಕೊಂಡು ಅಲ್ಲಿ ವಾಟರ್ ರೇಟ್ ಹಾಕಬೇಕಾಗುತ್ತದೆ.

ಶ್ರೀ ಪಿ. ಪಿ. ಹೆಗಡೆ .—ಅಲ್ಲಿ ನೀರು ಕೊಟ್ಟೇ ಇಲ್ಲ. ಇದನ್ನು ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಅಲ್ಲಿ ನೀರು ಕೊಟ್ಟೇ ಇಲ್ಲ ಎಂದು ಮಾನ್ಯ ಸದಸ್ಯರು ಹೇಳುವುದನ್ನು ನಂಬಿದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಂದ ಆ ಬಗ್ಗೆ ವರದಿ ಬಂದಮೇಲೆ ಆ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ವಿ ಎನ್. ಪಾಟೀಲ್ .— ಈಗ ಮಾನ್ಯ ಮಂತ್ರಿಗಳು ಹೇಳಿದರು ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡ ಮೇಲೆ ಅಲ್ಲಿ ವಿಚಾರ ಏನಾಗಿದೆ ಎಂಬುದು ಗೊತ್ತಾಗುತ್ತದೆ ಎಂದು. ಆದರೂ ಕೂಡ ಆ ಏರಿಯಾದ ಒಬ್ಬರು ಸದಸ್ಯರು ಅಲ್ಲಿ ನೀರು ಕೊಟ್ಟಿಲ್ಲ ಎಂದು ಹೇಳುವಾಗ ಅಧಿಕಾರಿಗಳಿಂದ ರಿಪೋರ್ಟ್ ಬರುವವರೆಗೂ ವಾಟರ್ ರೇಟನ್ನು ವಸೂಲು ಮಾಡದಂತೆ ತಡೆ ಆರ್ಡರ್ ಕಳುಹಿಸುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ .—ಈ ಪ್ರಶ್ನೆಗೆ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಆ ಮಾನ್ಯ ಸದಸ್ಯರು ಹೇಳುವುದನ್ನು ನಂಬಿದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಂದ ಆ ಬಗ್ಗೆ ವರದಿಯನ್ನು ತರಿಸಿಕೊಂಡಮೇಲೆ ಅಲ್ಲಿ ವಾಟರ್ ರೇಟ್ ಹಾಕಬೇಕಾಗುತ್ತದೆ. ಆದ್ದರಿಂದ ಅಧಿಕಾರಿಗಳಿಂದ ವರದಿ ಬರುವವರೆಗೂ ವಾಟರ್ ರೇಟ್ ವಸೂಲು ಮಾಡುವುದಕ್ಕೆ ತಡೆ ಇದ್ದೇ ಇರುತ್ತದೆ.

SELECTION FOR THE POSTS OF DEPUTY REGISTRAR OF CO-OPERATIVE SOCIETIES

656. SRI M. P. RAMASWAMY (Anekal) —Will the Minister for Co-operation be pleased to state :—

(*a*) the procedures adopted in selecting the Deputy Registrar of Co-operative Societies ;

(*b*) the reason for selecting thirty persons for the Deputy Registrar's post when there are no sufficient vacancies ?

SRI A. SHANKARA ALVA (Minister for Co-operation) .—

(*a*) As per the Cadre and Recruiment Rules of the Department of Co operation, the posts of Deputy Registrar of Co-operative Societies are filled up by promotion by selection from the Cadre of Assistant Registrars of Co-operative Societies who have put in 3 years of service as Assistant Registrar of Co operative S cieties. The selection is made by a Committee called the Departmental Pro otion C mmittee constituted by Government comprising of secretary, DHPC Department Registrar of Co-operative Societies and Senior Joint Registrar of Co-operativ Societies.

(*b*) Keeping in view the then existing vacancies and the vacancies that would be available in the near future, only 31 candidates were selected.

ಶ್ರೀ ಎಂ. ಬಿ. ರಾಮಸ್ವಾಮಿ .—ಸ್ವಾಮಿ ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಸಹಕಾರಿ ಇಲಾಖೆಯ ದರ್ಜೆ ಮತ್ತು ನೇಮಕಾತಿ ನಿಯಮಗಳ ಮೇರೆಗೆ, ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರಾಗಿ ಮೂರು ವರ್ಷ ಸೇವೆ ಸಲ್ಲಿಸಿದ ಅಸಿಸ್ಟೆಂಟ್ ರಿಜಿಸ್ಟ್ರಾರರ ದರ್ಜೆಯಿಂದ ಆಯ್ಕೆ ಮಾಡಿ ಬಡ್ತಿ ನೀಡುವ ಮೂಲಕ ಡೆಪ್ಯುಟಿ ರಿಜಿಸ್ಟ್ರಾರರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ಹೇಳಿದ್ದೀರಿ, ಈ ಒಂದು ಕ್ರಮ ತಪ್ಪಿ ಕೆಲವರಿಗೆ ಪ್ರಮೋಷನ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ .—ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ಮೂರು ವರ್ಷ ಸರ್ವೀಸ್ ಆಗಿರಬೇಕು, ಆಂಥವರ ಫೈಲ್ ಅವರ ಸರ್ವೀಸ್ ಮತ್ತು ಕಾನ್‌ಫಿಡೆನಿಯಲ್ ರಿಪೋರ್ಟ್ ನೋಡಿಕೊಂಡು ಕಮಿಟಿಯವರು ಒಂದು ಪಟ್ಟಿಯನ್ನು ತಯಾರು ಮಾಡುತ್ತಾರೆ. ಅವನ್ನು ಸರ್ಕಾರದವರು ಮಂಜೂರು ಮಾಡಿ ಅದರ ಪ್ರಕಾರ ಡೆಪ್ಯುಟಿ ರಿಜಿಸ್ಟ್ರಾರರನ್ನು ನೇಮಕ ಮಾಡಲಾಗುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ .—ಈಗ ಆ ಇಲಾಖೆಯಲ್ಲಿ ೩೧ ಜನ ಅಧಿಕಾರಿಗಳಿಗೆ ಬಡ್ತಿ ಕೊಟ್ಟಿದ್ದಾರೆ. ಅಲ್ಲಿ ಸಫಿಶಿಯಂಟ್ ವೇಕೆನ್ಸಿ ಇಲ್ಲದಿದ್ದರೂ ಅಲ್ಲಿ ತಮಗೆ ಬೇಕಾದವರಿಗೆ ಪ್ರಮೋಷನ್ ಕೊಡುವ ಪ್ರಮೇಯ ಏನಿದೆ?

ಶ್ರೀ ಎ. ಶಂಕರ ಆಳ್ವ .—ಈಗ ೩೧ ಜನಗಳಿಗೆ ಬಡ್ತಿ ಕೊಟ್ಟಿದೆ. ಅದರಲ್ಲಿ ಮೊದಲು ಪಟ್ಟಿಯನ್ನು ತಯಾರು ಮಾಡಿ ಈಗ ಸದ್ಯಕ್ಕೆ ೫-೬ ಜನಗಳನ್ನು ಮಾತ್ರ ನೇಮಕ ಮಾಡಿದ್ದೇವೆ. ಈ ಲಿಸ್ಟ್ ಮುಗಿದ ನಂತರ ಇನ್ನೊಂದು ಲಿಸ್ಟ್ ತಯಾರು ಮಾಡುತ್ತೇವೆ. ಲಿಸ್ಟ್ ಪ್ರಕಾರ ನೇಮಕ ಮಾಡಲಾಗುತ್ತಿದೆ.

ಶ್ರೀ ಎಂ ಬಿ. ರಾಮಸ್ವಾಮಿ .—ಈಗ ತಾವು ೩೧ ಜನ ಅಧಿಕಾರಿಗಳಿಗೆ ಏನು ಬಡ್ತಿ ಕೊಟ್ಟಿದ್ದೀರಿ ಅವರಿಗೆ ಯಾವಾಗ ಬಡ್ತಿ ಕೊಟ್ಟಿದ್ದೀರಿ ಮತ್ತು ಅವರ ಹೆಸರುಗಳನ್ನು ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ .—ಆ ವಿವರ ಈಗ ನನ್ನಲ್ಲಿ ಇಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ .—ಈಗ ತಾವು ಪಟ್ಟಿಯನ್ನೇನು ತಯಾರು ಮಾಡಿದೆ ಎಂದು ಹೇಳಿದ್ದೀರಿ ಈ ಪಟ್ಟಿ ನಮ್ಮ ಸರ್ಕಾರ ಬಂದಮೇಲೆ ತಯಾರು ಮಾಡಿದ್ದೋ ಅಥವಾ ಹಿಂದಿನ ಸರ್ಕಾರ ಇದ್ದಾಗ ತಯಾರು ಮಾಡಿದ್ದೋ ಮತ್ತು ಕೆಲವು ಅಧಿಕಾರಿಗಳ ಕಾನ್‌ಫಿಡೆನಿಷಿಯಲ್ ರಿಪೋರ್ಟ್ ಚೆನ್ನಾಗಿದ್ದರೂ ಅವರು ಆರ್ಹರಾಗಿದ್ದರೂ ಕೂಡ ಅವರ ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ .—ಅದು ನನ್ನ ಗಮನಕ್ಕೆ ಬಂದಿಲ್ಲ. ಆ ಪಟ್ಟಿಯನ್ನು ತಯಾರು ಮಾಡಿದ್ದಾರೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

MADAM SPEAKER .—Question No. 691 will be taken up day after tomorrow as the Hon. Minister for Education is not present today.

PERMITS FOR LUXURY TAXIS

712. SMT. W. F. FERNANDES (Coondapur) .—Will the Minister for Labour be pleased to state :—

(*a*) whether State permits of Tourist Taxis are renewed by the R.T.O's only for a part of the State and not for whole the State, and for the other part of the State the applicants are asked to apply to some other R.T.O. of another District, far away from their District ;

(*b*) if so, in view of the hardship caused to State permit applicants in this regard, whether Government intends to empower, all R.T.O's to renew State permits for the entire State ?